ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ. PW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿನಾಂಕ 01.08.2025

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ವಕೀಲರಿಂದಃ

ದರಸಗುಪ್ಪೆಯಿಂದ ಸಕ್ಕರೆ ಕಾರ್ಖಾನೆಗೆ ಸುಮಾರು ಅರ್ಧ ಕಿ.ಮಿ ಅಂತರ ಇರುತ್ತದೆ ಎಂದರೆ ಸರಿ. ಕಬ್ಬನ್ನು ಸಾಗಿಸಲು ಸಾರ್ವಜನಿಕರು ಪಟ್ಟಲದಮ್ಮ ದೇವಸ್ಥಾನದ ಮುಂದೆ ಹಾದು ಹೋಗುವ ರಸ್ತೆಯಲ್ಲಿ ಬಂದು ಅಲ್ಲಿಂದ ದರಸಗುಪ್ಪೆ ಮುಖ್ಯ ರಸ್ತೆಗೆ ಬಂದು ನಂತರ ಸಕ್ಕರೆ ಕಾರ್ಖಾನೆ ಕಡೆಗೆ ಹೋಗುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಪಟ್ಟಲದಮ್ಮ ದೇವಸ್ಥಾನದ ರಸ್ತೆಯಲ್ಲಿ ಸಾರ್ವಜನಿಕರು ಮಾತ್ರ ಓಡಾಡುತ್ತಾರೆ ಹಾಗೂ ಅಲ್ಲಿ ಯಾವುದೇ ಗಾಡಿಗಳು ಓಡಾಡುವುದಿಲ್ಲ ಎಂದು ನುಡಿಯುತ್ತಾರೆ.

ನಿಮ್ಮ ಜಮೀನಿನ ಪಶ್ಚಿಮ ದಿಕ್ಕಿಗೆ ಜವಾರಿ ಕಾಲುವೆ ಆದ ನಂತರ ರಸ್ತೆ ಇದ್ದು ಸದರಿ ರಸ್ತೆಯು ಎಷ್ಟು ಅಡಿ ರಸ್ತೆ ಇರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ರಸ್ತೆ ಇರುವುದಿಲ್ಲ ಎಂದು ನುಡಿಯುತ್ತಾರೆ.

ನಿಮ್ಮ ವಾದ ಪತ್ರದ ಚೆಕ್ಕು ಬಂದಿಯಲ್ಲಿ ಪಶ್ಚಿಮ ದಿಕ್ಕಿಗೆ ಕಾಲುವೆ ಮತ್ತು ರಸ್ತೆ ಎಂದು ಬರೆಸಿದ್ದು ಅದು ಸುಳ್ಳಿನಿಂದ ಕೂಡಿರುತ್ತದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅಲ್ಲಿ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ರಸ್ತೆಯು 33 ಅಡಿ ಅಗಲ ಇರುತ್ತದೆ. ರೈತರುಗಳು ಯಾವ ರಸ್ತೆ ಮುಖಾಂತರ ಕಬ್ಬನ್ನು ಸಾಗಿಸುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಜವಾರಿ ಕಾಲುವೆ ಪಕ್ಕದಲ್ಲಿ ರಸ್ತೆ ಇದ್ದು ಅದರಲ್ಲಿ ಕಬ್ಬನ್ನು ಸಾಗಿಸುತ್ತಾರೆ ಎಂದು ನುಡಿಯುತ್ತಾರೆ. ಸದರಿ ರಸ್ತೆಯ ಮುಖಾಂತರ ದರಸಗುಪ್ಪೆ ಗ್ರಾಮಕ್ಕೆ ಬಂದು ಅಲ್ಲಿಂದ ಸಕ್ಕರೆ ಕಾರ್ಖಾನೆಗೆ ಹೋಗುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಡಿ.1 ರಲ್ಲಿ ಕಾಣುವ ಬಸ್ ನಿಲ್ದಾಣದ ಹಿಂಭಾಗ ಕಾಳೇಗೌಡರ ಜಮೀನು ಇರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಕಾಳೇಗೌಡರ ಮನೆ ಇರುತ್ತದೆ ಎಂದು

ನುಡಿಯುತ್ತಾರೆ. ಕಾಳೇಗೌಡರ ಮನೆ ಆದ ನಂತರ ಅವರ ಜಮೀನು ಇರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಡಿ.1 ರಲ್ಲಿ ಲೈಟ್ ಕಂಬಗಳನ್ನು ಅಳವಡಿಸಿರುತ್ತಾರೆ ಎಂದರೆ ಸರಿ. ನಿಡಿ.1 ರಲ್ಲಿ ಬಸ್ ನಿಲ್ದಾಣದ ಪಕ್ಕದಲ್ಲಿ ಒಂದು ರಸ್ತೆ ಇರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ರಸ್ತೆಯ ಮುಖಾಂತರವೇ ಜವರಿ ಕಾಲುವೆಗೆ ಹೋಗಬೇಕಾಗುತ್ತದೆ ಎಂದರೆ ಸರಿಯಲ್ಲ. ಸದರಿ ರಸ್ತೆಯು ಎಲ್ಲಿಗೆ ಹೋಗುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅದು ಸರ್ವೆ ನಂ.370 ಕ್ಕೆ ಕೊನೆಗೊಳ್ಳುತ್ತದೆ ಎಂದು ನುಡಿಯುತ್ತಾರೆ. ಸದರಿ ರಸ್ತೆಯು ಪುರಾತನ ಕೊಳದ ರಸ್ತೆಗೆ ಸಂಪರ್ಕ ಕಲ್ಪಿಸುತ್ತದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಡಿ.1 ರಲ್ಲಿ ಕಾಣುವ ಮಣ್ಣು ರಸ್ತೆಯು ಜವರಿ ಕಾಲುವೆಗೆ ಹೋಗಿ ಸೇರುತ್ತದೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಈಗ ಒಂದು ಫೋಟೋವನ್ನು ತೋರಿಸಿ ಅದರಲ್ಲಿ ಎಡಭಾಗದಲ್ಲಿ ಕಾಣುವ ತೆಂಗಿನ ಮರಗಳು ಯಾರದ್ದು ಎನ್ನುವ ಪ್ರಶ್ನೆಗೆ ಸಾಕ್ಷಿಯು ನಮ್ಮದು ಎಂದು ನುಡಿಯುತ್ತಾರೆ. ಸಾಕ್ಷಿಯು ಸದರಿ ಫೋಟೋವನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಪ್ರತಿವಾದಿಯರ ಪರ ನಿಡಿ.2 ಎಂದು ಗುರುತಿಸಲಾಯಿತು. ಸದರಿ ತೆಂಗಿನ ಮರಗಳು ಸರ್ವೆ ನಂ.371 ರಲ್ಲಿ ಇರುತ್ತದೆ. ನಿಡಿ.2 ಅನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ತೆಂಗಿನ ಮರದ ಹತ್ತಿರ ಕಾಣುವ ಕಟ್ಟೆಯು ಜವರಿ ಕಾಲುವೆಯ ಕಟ್ಟೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅದನ್ನು ನೋಡಿ ಹೌದು ಎಂದು ನುಡಿಯುತ್ತಾರೆ.

1985 ರಲ್ಲಿ ನಿಮ್ಮ ತಂದೆಯವರು ಗೌಡೇಗೌಡರಿಗೆ ಹಾಗೂ ಗಿಣಿಸ್ವಾಮಿರವರಿಗೆ ಕ್ರಯಕ್ಕೆ ಕೊಡುವ ಸಂದರ್ಬದಲ್ಲಿ ದಕ್ಷಿಣ ದಿಕ್ಕಿಗೆ ರಸ್ತೆ ಇರುತ್ತದೆ ಎಂದು ಉದಹರಿಸಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಸರ್ವೆ ನಂ.369/2 ರಲ್ಲಿ ದಕ್ಷಿಣ ದಿಕ್ಕಿಗೆ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ನಿಡಿ.1 ರಲ್ಲಿ ಕಾಣುವ ಮಣ್ಣು ರಸ್ತೆಯನ್ನು ಈಗ ಜಲ್ಲಿ ಕಲ್ಲು ಹಾಕಿ ಮೆಟಲಿಂಗ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ.1 ರಲ್ಲಿ ಕಾಣುವ ಮಣ್ಣು ರಸ್ತೆಯಲ್ಲಿಯೇ ಸಾರ್ವಜನಿಕರು ಜವರಿ ಕಾಲುವೆಗೆ ಹೋಗುತ್ತಿದ್ದು ನಂತರ ಅಲ್ಲಿಂದ ಅವರುಗಳು ಅವರವರುಗಳ ಸ್ವತ್ತಿಗೆ ಓಡಾಡುತ್ತಾರೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಡಿ.1 ರಲ್ಲಿ ಕಾಣುವ ಮಣ್ಣಿನ ರಸ್ತೆಯಲ್ಲಿ ಸಾರ್ವಜನಿಕರು

ಓಡಾಡುತ್ತಾರೆ ಎಂದರೆ ಸರಿಯಲ್ಲ. ನಿಡಿ.1 ರಲ್ಲಿ ಕಾಣುವ ಲೈಟ್ ಕಂಬದಿಂದ ಹಿಡಿದು ನಿಡಿ.2 ರಲ್ಲಿ ಕಾಣುವ ತೆಂಗಿನ ಮರದವರೆಗೂ ನಮ್ಮ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಪ್ರತಿವಾದಿಯರು ನನಗೆ ಯಾವುದೇ ರೀತಿಯಲ್ಲೂ ತೊಂದರೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಗೆ ತೊಂದರೆ ನೀಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಸಾ.ಓ.ಹೇ.ಸ.ಒ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ., ಶ್ರೀರಂಗಪಟ್ಟಣ.**